**ಡಿ.ಡಬ್ಲ್ಯೂ- 1**

**ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಪಿ.ಸಿ., ವಾದಿ ಪರ ವಕೀಲರಿಂದಃ**

**5**. ಈ ದಾವೆಯಲ್ಲಿ ವಾದಿಯರು ಏನೇನು ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎಂಬುದು ನನಗೆ ಮಾಹಿತಿ ಇದೆ. ದಿನಾಂಕಃ 04-11-1993 ರಂದು ಮೃತ 4 ನೇ ಪ್ರತಿವಾದಿಯು, ವೀರಗಂಗಾದರಯ್ಯ ವರದಿಮಠ ಇವರಿಂದ ದಾವಾ ಶೆಡ್ಯೂಲ್-ಬಿ 3 ನೇ ಆಸ್ತಿಯನ್ನು ಖರೀದಿ ಹಿಡಿದಿರುತ್ತಾರೆಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದು ಸದ್ರಿ ಖರೀದಿ ಪತ್ರವನ್ನು ಹಾಜರು ಮಾಡಿಲ್ಲ. ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ.

**6.** ನನ್ನ ತಾಯಿ ಮತ್ತು ಚಿಕ್ಕಮ್ಮರವರು ಸಲ್ಲಿಸಿರುವ ಅಸಲು ದಾವಾ ಸಂಖ್ಯೆಃ137/2013 ರಲ್ಲಿಯ ದಾವಾಸ್ತಿಗಳು ಮತ್ತು ಪ್ರಸ್ತುತ ದಾವೆಯ ದಾವಾಸ್ತಿಗಳು ಎರಡು ಒಂದೇ ಆಸ್ತಿಗಳು ಎಂದರೆ ಸರಿ. ಸದ್ರಿ ದಾವೆಯನ್ನು ನನ್ನ ಮಾವನಾದ ರುದ್ರಯ್ಯರವರ ಮೇಲೆ ಹಿಸ್ಸೆ ಕೇಳಿ ಹಾಕಿದ್ದರು ಎಂದರೆ ಸರಿಯಲ್ಲ. ಸದ್ರಿ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮೃತಪಟ್ಟಾಗ ಸುಮಾರು 85 ರಿಂದ 90 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು 75 ರಿಂದ 80 ವರ್ಷ ವಯಸ್ಸಾಗಿರಬಹುದು ಎಂದು ನುಡಿಯುತ್ತಾರೆ. ನನ್ನ ಅಜ್ಜಿಗೆ ಬಿಪಿ, ಶುಗರ ಮತ್ತು ಕಿಡ್ನಿ ವೈಪಲ್ಯ ಆಗಿತ್ತು ಎಂದರೆ ಸಾಕ್ಷಿಯು ಬಿಪಿ, ಶುಗರ ಇತ್ತು ಆದರೆ ಕಿಡ್ನಿ ಚೆನ್ನಾಗಿಯೇ ಇತ್ತು ಎಂದು ನುಡಿಯುತ್ತಾರೆ. ಸದ್ರಿಯವರಿಗೆ ಹೃದಯ ಖಾಯಿಲೆ ಇತ್ತು ಎಂದರೆ ಸರಿ. ಸದ್ರಿಯವರು ಎದ್ದು ಓಡಾಡಲು ಆಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ಮಂಡಿ ನೋವು ಇತ್ತು, ಎದ್ದು ಸ್ವಲ್ಪ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಮರಣ ಹೊಂದುವವರೆಗೂ ಅವರ ಪ್ರತಿದಿನದ ಚಟುವಟಿಕೆಗಳಿಗೆ ಬೇರೊಬ್ಬರನ್ನು ಅವಲಂಬಿತರಾಗಿದ್ದರು ಎಂದರೆ ಸಾಕ್ಷಿಯು ಅವರು ಸಾಯುವ ಒಂದು ವರ್ಷಕ್ಕಿಂತ

ಮೊದಲು ಅವರ ಪ್ರತಿದಿನದ ಚಟುವಟಿಕೆಗಳನ್ನು ಅವರೇ ಮಾಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. 2012 ರಲ್ಲಿ ನನ್ನ ಅಜ್ಜಿಗೆ ಹೃದಯ ಖಾಯಿಲೆ ಆಯಿತು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸ್ವರ್ಗಿಯವರು ಹೃದಯ ಖಾಯಿಲೆ ಮತ್ತು ಇತರೆ ಖಾಯಿಲೆಗಳಿಗೆ ಹಾವೇರಿಯ ಡಾಃ ಹೊರಡಿಯವರ ಹತ್ತಿರ ಔಷದೋಪಚಾರ ಪಡೆಯುತ್ತಿದ್ದರು ಎಂದರೆ ಸರಿ. ಸ್ವರ್ಗಿಯವರು 2012 ರಿಂದ 2015 ರವರೆಗೆ ಅಂದರೆ ಮರಣ ಹೊಂದುವವರೆಗೆ ಡಾಃ ಹೊರಡಿಯವರ ಬಳಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಸ್ವರ್ಗಿ ವಿಚಾರದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇದ್ದರೂ ಸಹ ನಮ್ಮ ಕೇಸಗೆ ತೊಂದರೆಯಾಗುತ್ತದೆ ಎಂದು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾವಾಸ್ತಿಗಳು ಮೂಲ ಪುರುಷ ಶಿವಶಂಕ್ರಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಲ್ಲಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್-ಬಿ, 4 ಮತ್ತು 5 ನೇ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್-ಬಿ 1 ನೇ ಆಸ್ತಿಯು ಸಹ ಮೂಲ ಪುರುಷ ಶಿವಶಂಕ್ರಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಎಂದರೆ ಸರಿ. ನಿಡಿ-6 ಭಕ್ಷೀಸ ಪತ್ರದಲ್ಲಿರುವಂತಹ ಎಲ್ಲ ಆಸ್ತಿಗಳು ಸಹ ಶಿವಶಂಕ್ರಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಎಂದರೆ ಸಾಕ್ಷಿಯು ರುದ್ರಯ್ಯರವರು ಖರೀದಿ ಹಿಡಿದಂತಹ ಆಸ್ತಿಗಳು ಎಂದು ನುಡಿಯುತ್ತಾರೆ. ರುದ್ರಯ್ಯರವರಿಗೆ ಅವರ ತಂದೆಯಿಂದ ಬಂದಂತಹ ಪಿತ್ರಾರ್ಜಿತ ಆಸ್ತಿಗಳು ಎಂಬ ವಿಚಾರ ನನಗೆ ಗೊತ್ತಿದ್ದರೂ ಸಹ ಅವರು ಖರೀದಿ ಹಿಡಿದಂತಹ ಆಸ್ತಿಗಳೆಂದು ನನ್ನ ಕೇಸಗೆ ತೊಂದರೆಯಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯಾದ ನನ್ನ ತಾಯಿಯು ನಿಡಿ-6 ಭಕ್ಷೀಸ ಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡ ಭಕ್ಷೀಸ

ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-7 ಮೃತ್ಯು ಪತ್ರವನ್ನು ಸಹ ಖೊಟ್ಟಿಯಾಗಿ ಸೃಷ್ಠಿ ಮಾಡಿಕೊಂಡಂತಹ ಪತ್ರ ಎಂದರೆ ಸರಿಯಲ್ಲ.

**8.** ನನ್ನ ಅಜ್ಜಿ ಅನುಸುಯಾದೇವಿರವರಿಗೆ 75-80 ವರ್ಷ ವಯಸ್ಸಾಗಿದ್ದರಿಂದ ಅವರು ಮೇಲೆ ಹೇಳಿದ ರೀತಿಯ ಖಾಯಿಲೆಯಿಂದ ಬಳಲುತ್ತಿದ್ದುದ್ದರಿಂದ ಮೃತ್ಯು ಪತ್ರವನ್ನು ಮಾಡಿಕೊಟ್ಟಿಲ್ಲ, ನಾವು ನಿಡಿ-7 ರಂತೆ ಮೃತ್ಯು ಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾಸ್ತಿಗಳಲ್ಲಿ ಹಿಸ್ಸೆ ಇದ್ದರೂ ಸಹ ಅವರ ಹಿಸ್ಸೆಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.